# ನಗರಸಭಾ ಕಾರ್ಯಾಲಯ, ಚಿತ್ರದುರ್ಗ

ನಂ:ನಸಚಿ:ಇಂವಿ:(1)ಟೆಂಡರ್:ಸಿಆರ್:02:2008-09 ದಿನಾಂಕ: 25-06-2008

## ಟೆಂಡರ್ ಪ್ರಕಟಣೆ

ಚಿತ್ರದುರ್ಗ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ದರ್ಜೆಯ ಲೋಕೋಪಯೋಗಿ ಇಲಾಖೆ ಹಾಗೂ ನಗರಸಭೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರುಗಳಿಂದ ದ್ವಿ ಪ್ರತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಚಿತ್ರದುರ್ಗ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ದರ್ಜೆಯ ಲೋಕೋಪಯೋಗಿ
ಇಲಾಖೆ ಹಾಗೂ ನಗರಸಭೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಟೆಂಡರ್ ದಾಖಲಾತಿ ಕೋರಿ ಅರ್ಜಿ ಸಲ್ಲಿಸುವ ದಿನಾಂಕ: 25-07-2008 ಸಂಜೆ 4.30 ರವರೆಗೆ.
2) ಟೆಂಡರ್ ಫಾರಂಗಳನ್ನು ಕಛೇರಿಯಿಂದ ಕೊಡುವ ದಿನಾಂಕ: 28-07-2008 ರಿಂದ 30-07-2008 ರ ಸಂಜೆ 5.30 ಘಂಟೆವರೆಗೆ
3) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸುವ ದಿನಾಂಕ: 31-07-2008 ರಂದು 4.30 ಘಂಟೆಯೊಳಗಾಗಿ.
4) ಟೆಂಡರ್ ತೆರೆಯುವ ದಿನಾಂಕ: 31-07-2008 ರಂದು ಸಾಯಂಕಾಲ 5-00 ಗಂಟೆಗೆ.

| ಕ್ರ. ಸಂ | ಕಾಮಗಾರಿ ವಿವರ | ಟೆಂಡರಿಗಿಟ್ಟ ಮೊತ್ತ | ಮುಂಗಡ ಠೇವಣಿ ಮೊತ್ತ | ಟೆಂಡರ್ ಫಾರಂ ಮೊತ್ತ | ಕೆಲಸ ಪೂರ್ತಿ ಗೊಳಿಸವ ಅವಧಿ | ಗುತ್ತಿಗೆ ದಾರರ ದರ್ಜೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ನಗರಸಭೆ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಕಂಬಗಳಿಗೆ ನಂಬರಿಂಗ್ ಮಾಡುವ ಕಾಮಗಾರಿ. | 3,09,000/- | 7725/- | 500/- | 2 ತಿಂಗಳು | 3ನೇ ದರ್ಜೆ |
| 2 | ವಾ:ನಂ: 6 ಬಸವೇಶ್ವರ ಟಾಕೀಸ್ ರಸ್ತೆಯಿಂದ ಬಿ,ಡಿ ರಸ್ತೆವರೆಗೆ ಯು.ಜಿ.ಡಿ ಪೈಪ್ ಲೈನ್ ಕಾಮಗಾರಿ. | 1,22,000/- | 3050/- | 500/- | 1 ತಿಂಗಳು | 3ನೇ ದರ್ಜೆ |
| 3 | ವಾ:ನಂ: 24 ಹಿಮ್ಮತ್‌ನಗರ ಜಬೀ ಮನೆಯಿಂದ ಅಂಗನವಾಡಿ ಶಾಲೆಯವರೆಗೆ ಯು.ಜಿ.ಡಿ ಲೈನ್ ಅಳವಡಿಸಿ ಮ್ಯಾನ್‌ಹೋಲ್ ನಿರ್ಮಾಣ ಕಾಮಗಾರಿ. | 1,10,000/- | 2750/- | 500/- | 1 ತಿಂಗಳು | 3ನೇ ದರ್ಜೆ |
| 4 | ವಾ:ನಂ:04 ರಲ್ಲಿ ಉಮಾ ಮಹೇಶ್ವರಿ ದೇವಸ್ಥಾನದ ರಸ್ತೆ ಉಮಾಪತಿ ಮನೆ ಹಿಂಭಾಗದಿಂದ ಆಯಿತೋಳ್ ಗೋವಿಂದಪ್ಪನ ಮನೆವರೆಗೆ ಚರಂಡಿ ನಿರ್ಮಾಣ ಹಾಗೂ ಆರ್.ಸಿ.ಸಿ ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ. | 72,000/- | 1800/- | 300/- | 1 ತಿಂಗಳು | 4ನೇ ದರ್ಜೆ |
| 5 | ವಾ:ನಂ: 08 ಗರಡಿ ಮನೆ ರಸ್ತೆ ನಸುರುಲ್ಲಾ ಶರೀಫ್ ಮನೆ ಮುಂಭಾಗ ಕಲ್ವರ್ಟ್ ನಿರ್ಮಾಣ ಮಾಡುವುದು. | 68,000/- | 1700/- | 300/- | 1 ತಿಂಗಳು | 4ನೇ ದರ್ಜೆ |
| 6 | ವಾ:ನಂ:08 ಗರಡಿಮನೆ ರಸ್ತೆ ಮುಂಭಾಗದಲ್ಲಿ ಕಲ್ವರ್ಟ್‌ನಿರ್ಮಾಣ ಮಾಡುವುದು. | 68,000/- | 1700/- | 300/- | 1 ತಿಂಗಳು | 4ನೇ ದರ್ಜೆ |
| 7 | ವಾ:ನಂ:08 ರಮೇಶ್ ಅಂಗಡಿ ಬದಿಯಲ್ಲಿ ಕಲ್ವರ್ಟ್ ನಿರ್ಮಿಸುವುದು. | 68,000/- | 1700/- | 300/- | 1 ತಿಂಗಳು | 4ನೇ ದರ್ಜೆ |
| 8 | ವಾ:ನಂ: 10 ಹೊಳಲ್ಕೆರೆ ರಸ್ತೆ ರವಿ ನರ್ಸಿಂಗ್ ಹೋಮ್ ಹಿಂಭಾಗದ ಯು.ಜಿ.ಡಿ ಕಾಮಗಾರಿ. | 51,000/- | 1275/- | 300/- | 1 ತಿಂಗಳು | 4ನೇ ದರ್ಜೆ |

| | | | | | | |
|---|---|---|---|---|---|---|
| 9 | ವಾ:ನಂ:ಜೆ.ಜೆ.ಹಟ್ಟಿ ನೀರಿನ ಟ್ಯಾಂಕ್ ಸುತ್ತಾ ತಡೆಗೋಡೆ ಕಟ್ಟುವುದು. | 41,000/- | 1025/- | 300/- | 1 ತಿಂಗಳು | 4ನೇ ದರ್ಜೆ |
| 10 | ವಾ:ನಂ: 03 ಕಾಮನಬಾವಿ ಬಡಾವಣೆ 1ನೇ ಅಡ್ಡರಸ್ತೆ ಬೋರಪ್ಪ ಮನೆ ಹಿಂಭಾಗ 6" ಯು.ಜಿ.ಡಿ. ಪೈಪ್ ಲೈನ್ ರಿಪೇರಿ ಕಾಮಗಾರಿ. | 19,000/- | 475/- | 300/- | 1 ತಿಂಗಳು | 4ನೇ ದರ್ಜೆ |
| 11 | ಜಿಲ್ಲಾ ಆಸ್ಪತ್ರೆ ಮುಂಭಾಗದಲ್ಲಿ ಬಿದ್ದಿರುವ ಬೀದಿ ದೀಪದ ಕಂಬವನ್ನು ದುರಸ್ತಿ ಗೊಳಿಸಿ ಹೊಸದಾಗಿ ಸೋಡಿಯಂ ಸೆಟ್ ಅಳವಡಿಸುವ ಬಗ್ಗೆ. | 17,500/- | 438/- | 300/- | 1 ತಿಂಗಳು | 4ನೇ ದರ್ಜೆ |

## ಷರತ್ತುಗಳು

1. ಗುತ್ತಿಗೆದಾರರು ಪಿ.ಡಬ್ಲ್ಯೂ.ಡಿ ಯಲ್ಲಿ ಹಾಗೂ ನಗರಸಭೆಯಲ್ಲಿ 2007-08 ನೇ ಸಾಲಿನಲ್ಲಿ ನೊಂದಾಯಿತ ರಾಗಿದ್ದವ ರಾಗಿರಬೇಕು.

2. ಗುತ್ತಿಗೆದಾರರು, 2007-08 ನೇ ಸಾಲಿ ಗುತ್ತಿಗೆ ನೊಂದಾವಣಿ ಪ್ರಮಾಣ ಪತ್ರ, ತೆರಿಗೆ ಹಾಗೂ ವ್ಯಾಟ್ ಪ್ರಮಾಣ ಪತ್ರ ಬಗ್ಗೆ ಪ್ರಮಾಣ ಪತ್ರವನ್ನು ಟೆಂಡರುಗಳೊಂದಿಗೆ ನೀಡುವುದು.

3. ನಿಗಧಿ ಪಡಿಸಿರುವ ಮುಂಗಡ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಡಿ.ಡಿ ಮುಖಾಂತರವೇ ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ ರವರ ಹೆಸರಿಗೆ ಚಿತ್ರದುರ್ಗದಲ್ಲಿ ಪಾವತಿಯಾಗುವಂತೆ ತೆಗೆದು ಟೆಂಡರ ಜೊತೆ ಸಲ್ಲಿಸತಕ್ಕದ್ದು.

4. ಟೆಂಡರ್ ಫಾರ್ಮನಲ್ಲಿ ಅಂದಾಜು ಪತ್ರಿಕೆಗಿಂತ ಕಡಿಮೆ ದರ ನಮೂದಿಸುವ ಗುತ್ತಿಗೆದಾರರು ಅಷ್ಟೇ ಮೊತ್ತದ ಡಿ.ಡಿಯನ್ನು ಟೆಂಡರ ಫಾರ್ಮಿನ ಜೊತೆಗೆ ಕಡ್ಡಾಯವಾಗಿ ಲಗತ್ತಿಸಬೇಕು.

5. ಕ್ರಮ ಸಂಖ್ಯೆ: 2,3 ಮತ್ತು 4 ರಂತೆ ಪ್ರಮಾಣ ಪತ್ರ ಹಾಗೂ ಮುಂಗಡ ಠೇವಣಿಯನ್ನು ತುಂಬದೇ ಇದ್ದ ಟೆಂಡರಗಳನ್ನು ತಿರಸ್ಕರಿಸಲಾಗುವುದು.

6. ಎಲ್ಲಾ ಕಾಮಗಾರಿಗಳಿಗೆ ಬಿಡ್ಡುದಾರರು ನೀಡಿರುವ ದರಗಳು ಒಂದು ವರ್ಷ ಕಾಲಾವಧಿಗೆ ಸಿಂಧುತ್ವ ಇರುತ್ತದೆ.

7. ಗುತ್ತಿಗೆದಾರರು ಕಾಮಗಾರಿಯ ಸ್ಥಳ ಪರಿಶೀಲಸಿದ ನಂತರವೇ ಟೆಂಡರ ಸಲ್ಲಿಸತಕ್ಕದ್ದು.

8. ದಿನಾಂಕ:31.07.2008 ರಂದು ಸಾಯಂಕಾಲ 5-00 ಗಂಟೆಗೆ, ನಗರಸಭೆಯ ಸಭಾ ಭವನದಲ್ಲಿ, ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಸ್ವಿಕೃತವಾಗಿರುವ ಟೆಂಡರ್‌ಗಳನ್ನು ತೆರೆಯಲಾಗುವುದು.

9. ಕಾಮಗಾರಿ ನಡೆಯುವ ಸ್ಥಳದಲ್ಲಿ ಕಾಮಗಾರಿಯ ಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಅಳವಡಿಸತಕ್ಕದ್ದು ಮತ್ತು ಕಾಮಗಾರಿಯ ಸ್ಥಳದಲ್ಲಿ ಗುತ್ತಿಗೆದಾರರ ವತಿಯಿಂದ ಡಿ.ಸಿ.ಇ ವಿದ್ಯೆರ್ಹತೆಯ ವ್ಯಕ್ತಿಯನ್ನು ಕಾಮಗಾರಿಯ ವೇಳೆ ಮೇಲುಸ್ತುವಾರಿ ನೋಡಿಕೊಳ್ಳಲು ನಿಯೋಜಿಸುವುದು.

10. ಕಾಮಗಾರಿಗಳ ಮೂರು ಹಂತದ ಛಾಯಾ ಚಿತ್ರವನ್ನು ಕಡ್ಡಾಯವಾಗಿ ತೆಗೆಯತಕ್ಕದ್ದು. (ಕಾಮಗಾರಿಯ ಪೂರ್ವದಲ್ಲಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ವಗೊಂಡ ನಂತರ).

11. ಟೆಂಡರಿನಲ್ಲಿ ಇಟ್ಟ ಅವಧಿಯು ಮಳೆಗಾಲವನ್ನು ಹೊರತುಪಡಿಸಿದ್ದು. ಸದರಿ ಗುತ್ತಿಗೆದಾರರು ಟೆಂಡರಿನಲ್ಲಿ ಇಟ್ಟ ಅವಧಿಯಲ್ಲಿ ಕಾಮಗಾರಿ ಪೂರ್ತಿಗೊಳಿಸದೇ ಇದ್ದಲ್ಲಿ ತಮಗೆ ಯಾವುದೇ ನೋಟಿಸನ್ನು ನೀಡದೇ ತಮ್ಮ ಟೆಂಡರ ರದ್ದುಗೊಳಿಸಿ 2 ನೇ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವುದು. ಹಾಗೂ ಹೆಚ್ಚಿಗೆ ಬೀಳುವ ಮೊತ್ತವನ್ನು ತಮ್ಮಿಂದ ವಸೂಲಿ ಮಾಡಲಾಗುವುದು.

12. ಕಾಮಗಾರಿಗಳನ್ನು ಪ್ರಾರಂಭ ಮಾಡುವ ಮುನ್ನವೇ ಸಾಮಾಗ್ರಿಗಳ ಗುಣಮಟ್ಟದ ಬಗ್ಗೆ ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ನಗರಸಭೆಯಿಂದ ನಿಯೋಜನೆಗೊಂಡ ಮೂರನೇ ಪಾರ್ಟಿಯಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ಪ್ರಮಾಣ ಪತ್ರ ಪಡೆದ ನಂತರವೇ ಗುತ್ತಿಗೆದಾರರಿಗೆ ಬಿಲ್ಲನ್ನು ಪಾವತಿ ಮಾಡಲಾಗುವುದು.

13. ಕಾಮಗಾರಿಯ ಮುಕ್ತಾಯದ ನಂತರ ನಿರ್ವಹಣಾ ಅವಧಿ 2 ವರ್ಷ ಇದ್ದು. ಗುಣವಟ್ಟವನ್ನು ಪರಿಶೀಲಿಸಿ ಭದ್ರತಾ ಠೇವಣಿ ಹಿಂತಿರುಗಿಸಲಾಗುವುದು.

14. ಟೆಂಡರನ್ನು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.

15. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವ ನಗರಸಭೆಯ ಅಂತರ್‌ಜಾಲ www.chitradurgacity.gov.in ನಲ್ಲಿ ಪಡೆಯಬಹುದಾಗಿದೆ.

(ಎಸ್.ಪಿ.ಮುಧೋಳ್)ಕೆ.ಎಂ.ಎ.ಎಸ್
ಪೌರಾಯುಕ್ತರು
ನಗರಸಭೆ, ಚಿತ್ರದುರ್ಗ

(ಗೌಸೀಯಾಬಾನು)
ಅಧ್ಯಕ್ಷರು
ನಗರಸಭೆ, ಚಿತ್ರದುರ್ಗ

ಪ್ರತಿಯನ್ನು:
1) ಕಾರ್ಯಪಾಲಕ ಅಭಿಯಂತರರು, ಜಿಲ್ಲಾಪಂಚಾಯತ್ ಕಚೇರಿ, ಚಿತ್ರದುರ್ಗ ತಮ್ಮ ಕಚೇರಿಯ ನಾಮಫಲಕದಲ್ಲಿ ಪ್ರಕಟಿಸಲು ಕೋರಿದೆ.
2) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ. ತಮ್ಮ ಕಚೇರಿಯ ನಾಮಫಲಕದಲ್ಲಿ ಪ್ರಕಟಿಸಲು ಕೋರಿದೆ.
3) ತಹಶೀಲ್ದಾರ್, ತಾಲ್ಲೂಕು ಕಚೇರಿ, ಚಿತ್ರದುರ್ಗ ತಮ್ಮ ಕಚೇರಿಯ ನಾಮಫಲಕದಲ್ಲಿ ಪ್ರಕಟಿಸಲು ಕೋರಿದೆ.
4) ಜಿಲ್ಲಾ ಗ್ರಂಥಾಲಯ ಅಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ. ತಮ್ಮ ಕಚೇರಿಯ ನಾಮಫಲಕದಲ್ಲಿ ಪ್ರಕಟಿಸಲು ಕೋರಿದೆ.
5) ಗೋವಿಂದ್ ನಾಯಕ್ , ಸೀನಿಯರ್ ಪ್ರೋಗ್ರಾಮರ್, ಇವರಿಗೆ ವೆಬ್‌ಸೆಟ್‌ನಲ್ಲಿ ಪ್ರಕಟಿಸಲು ಆದೇಶಿಸಿದೆ.
6) ಕಚೇರಿ ನಾಮಫಲಕಕ್ಕೆ.
7) ಕಚೇರಿ ಕಡತಕ್ಕೆ.